**ಕರ್ನಾಟಕ ಸರ್ಕಾರ**

ಸಂಖ್ಯೆ: ಆಇ 18 ಬಿಪಿಇ 2020 ಕರ್ನಾಟಕ ಸರ್ಕಾರದ ಸಚಿವಾಲಯ

ವಿಧಾನಸೌಧ,

ಬೆಂಗಳೂರು, ದಿನಾಂಕ:12–10–2020

**ಸುತ್ತೋಲೆ**

ವಿಷಯ:–2021–22ನೇ ಸಾಲಿನ ಅನುಬಂಧ–ಬಿ–ವೇತನಗಳ ಅಂದಾಜುಗಳು.

********

1. **ಅಂದಾಜಿಸುವ ವಿಧಾನ**:

(ಎ) 2015–16ನೇ ಸಾಲಿನಿಂದ ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯ (HRMS) ಮೂಲಕ ಕಾರ್ಯನಿರತ ಸಂಖ್ಯಾಬಲದ ವಿವರಗಳನ್ನು ಪಡೆದುಕೊಂಡು ಅಪೆಂಡಿಕ್ಸ್–ಬಿ ಗಾಗಿ ವೇತನದ ಅಂದಾಜುಗಳನ್ನು ಮಾಡಲಾಗುತ್ತಿದೆ. ಆದಾಗ್ಯೂ, HRMSನ ಸುಧಾರಿತ ಆವೃತ್ತಿಯ ಮಾದರಿಯನ್ನು (Organogram Module) ಬಳಸಿ ಪಡೆಯಲಾದ ಮಂಜೂರಾದ ಹುದ್ದೆಗಳ ಮಾಹಿತಿಯನ್ನು ಸಂಬಂಧಿಸಿದ ಇಲಾಖಾ ಮುಖ್ಯಸ್ಥರುಗಳಿಂದ ಪಡೆದುಕೊಳ್ಳಲಾಗುತ್ತಿದೆ.

(ಬಿ) ಆರ್ಥಿಕ ವರ್ಷ 2021–22ನೇ ಸಾಲಿನಲ್ಲಿಯೂ ಅನುಬಂಧ–ಬಿ ವೇತನಗಳನ್ನು ಅಂದಾಜು ಮಾಡಲು ಆರ್ಥಿಕ ಇಲಾಖೆಯು ಸುಧಾರಿತ ಆವೃತ್ತಿಯ ಮಾದರಿ(Organogram Module) ಯ ಮೂಲಕ ಮಂಜೂರಾದ ಹುದ್ದೆಗಳ ಅಂಕಿ–ಅಂಶಗಳನ್ನು ಬಳಸಿಕೊಳ್ಳುತ್ತದೆ ಮತ್ತು ಹಿಂದಿನಂತೆ ಯಾವುದೇ ಸಿದ್ಧಪಡಿಸಿದ ಮಾಹಿತಿಯನ್ನು ಭೌತಿಕವಾಗಿ(manually) ಸ್ವೀಕರಿಸಲಾಗುವುದಿಲ್ಲ. ಆದ್ದರಿಂದ, ಇಲಾಖಾ ಮುಖ್ಯಸ್ಥರು ಒದಗಿಸುವ ಮಾಹಿತಿಯಲ್ಲಿ ಯಾವುದೇ ಲೋಪವಿದ್ದಲ್ಲಿ ಅಥವಾ ವ್ಯತ್ಯಾಸಗಳಿದ್ದಲ್ಲಿ ವೇತನಗಳಡಿ ಕಡಿಮೆ ಅನುದಾನ ನಿಗದಿಯಾಗುತ್ತದೆ ಎಂಬುದನ್ನು ಗಮನದಲ್ಲಿಡುವುದು.

2. **ಆಡಳಿತ ಇಲಾಖೆಗಳ ಪಾತ್ರ:**

(ಎ) ಆಯವ್ಯಯ ಅಂದಾಜು ಅಧಿಕಾರಿಗಳು ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯಲ್ಲಿ ಮಂಜೂರಾದ ಸಂಖ್ಯಾಬಲದ ವಿವರಗಳ ಮಾಹಿತಿಯನ್ನು ಕಡ್ಡಾಯವಾಗಿ Update ಮಾಡತಕ್ಕದ್ದು.

(ಬಿ) URL 'hrmsorg' ಯಲ್ಲಿ ದಾಖಲಿಸಲು https://202.138.100.206/HRMS2 ಅಂತರ್ಜಾಲ ಬ್ರೌಸರ್‌ನ್ನು ಬಳಸಿ. ಸಂಬಂಧಪಟ್ಟ ಇಲಾಖೆಗಳಿಗೆ ಈಗಾಗಲೇ ಒದಗಿಸಲಾಗಿರುವ ಇಲಾಖಾ ಮುಖ್ಯಸ್ಥರುಗಳ ಪರಿಚಯ ಪತ್ರದ (Credentials) ಮೂಲಕ ಲಾಗಿನ್ ಆಗುವುದು. ಲಾಗಿನ್ ಯಶಸ್ವಿಯಾದ ನಂತರ ಸಂಬಂಧಪಟ್ಟ ಇಲಾಖೆಯ ಹೆಸರು ಪುಟದ ಮೇಲ್ಭಾಗದಲ್ಲಿ ಪ್ರಕಟಗೊಳ್ಳುತ್ತದೆ. ಇಲಾಖೆಯನ್ನು ಆಯ್ಕೆ ಮಾಡಿದ ನಂತರ, ಇಲಾಖೆಗಳು 2020–21ನೇ ಸಾಲಿನಲ್ಲಿ ದಾಖಲಿಸಿದ ಪ್ರಕಾರ ವೇತನ ಶ್ರೇಣಿವಾರು ಮಂಜೂರಾದ ಸಂಖ್ಯಾ ಬಲದ ವಿವರಗಳು ಪರದೆಯ ಮೇಲೆ ಪ್ರಕಟಗೊಳ್ಳುತ್ತದೆ.

(ಸಿ) ಆನಂತರ, ಒದಗಿಸಿರುವ ಮಂಜೂರಾದ ಸಂಖ್ಯಾಬಲದ ವಿವರಗಳು ಸರಿ ಇದೆಯೇ ಎಂದು ಪರಿಶೀಲಿಸಿ, ಈ ವಿವರಗಳು ಸರಿಯಿದ್ದಲ್ಲಿ, ಆರ್ಥಿಕ ವರ್ಷ 2021–22ರ ಅನುಬಂಧ–ಬಿ ಅಂದಾಜುಗಳನ್ನು ತಯಾರಿಸಲು ಒದಗಿಸುವುದು. ಹುದ್ದೆಗಳ ಸೃಜನೆ/ರದ್ದತಿ/ಉನ್ನತೀಕರಣ/ನಿಮ್ನೀಕರಣ/ಸ್ಥಳಾಂತರ ಮುಂತಾದ ಕಾರಣಗಳಿಂದ ಒದಗಿಸಲಾದ ಅಂಕಿ–ಅಂಶಗಳಲ್ಲಿ ಯಾವುದಾದರು ಬದಲಾವಣೆಯಿದ್ದಲ್ಲಿ ಪೋರ್ಟಲ್‌ನಲ್ಲಿ ಸೂಕ್ತವಾಗಿ ಮಾರ್ಪಡಿಸಿ, ಆನಂತರ ಈ ಬದಲಾವಣೆಗಳ ಬಗ್ಗೆ ಇಲಾಖಾ ಮುಖ್ಯಸ್ಥರು ದೃಢೀಕರಿಸಿ, ಸಹಿ ಮಾಡಿದ ಧೃಢೀಕರಣ ಪತ್ರವನ್ನು ಆರ್ಥಿಕ ಇಲಾಖೆಗೆ ಸಲ್ಲಿಸತಕ್ಕದ್ದು.

(ಡಿ) ಎಲ್ಲಾ ಬಾಬ್ತುಗಳಿಗೆ ಸಂಬಂಧಿಸಿದಂತೆ ದಾಖಲಿಸಲಾಗಿರುವ ಅಂಕಿ–ಅಂಶಗಳು ಸಂಪೂರ್ಣವಾಗಿವೆಯೆಂದು ಮನವರಿಕೆಯಾದಲ್ಲಿ ಮತ್ತು ದಾಖಲಿಸಿರುವ ಅಂಕಿ–ಅಂಶಗಳನ್ನು ಪರಿಶೀಲಿಸಿ ತೃಪ್ತಿಕರವೆಂದು ಕಂಡು ಬಂದ ನಂತರ ಇಲಾಖಾ ಮುಖ್ಯಸ್ಥರುಗಳು ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯಿಂದ ಧೃಢೀಕರಣ ಪತ್ರವನ್ನು ಪಡೆದು ಮೇಲೆ ತಿಳಿಸಿರುವ ವಿಧಾನದಂತೆ ತಮ್ಮ ಸಹಿಯೊಂದಿಗೆ ಆರ್ಥಿಕ ಇಲಾಖೆಗೆ ಕಳುಹಿಸಿಕೊಡತಕ್ಕದ್ದು. **2021–22ನೇ ಸಾಲಿಗೆ ಹುದ್ದೆಗಳು ಮತ್ತು ವೇತನಗಳಿಗೆ ಸಂಬಂಧಿಸಿದಂತೆ ಅಂದಾಜುಗಳನ್ನು/ವಿಶ್ಲೇಷಣೆಗಳನ್ನು ಮಾಡಲು HRMS-2 ಮೂಲಕ ಪಡೆಯಲಾಗುವ ಸಹಿಯಾಗಿರುವ ವರದಿಯನ್ನೇ ಅಧಿಕೃತವೆಂದು ಪರಿಗಣಿಸಿ ಸ್ವೀಕರಿಸಲಾಗುವುದು ಮತ್ತು ಅಂತಹ ವರದಿಯನ್ನು ಮಾತ್ರ ಆರ್ಥಿಕ ಇಲಾಖೆಯಲ್ಲಿ ಬಳಸಲಾಗುವುದು. ಧೃಢೀಕರಣ ಪತ್ರವನ್ನು ಸಲ್ಲಿಸಲು ದಿ:07.11.2020 ಅಂತಿಮ ದಿನಾಂಕವಾಗಿರುತ್ತದೆ.**

(ಇ) ರಾಜ್ಯ ಮತ್ತು ಜಿಲ್ಲಾ ವಲಯಗಳಿಗೆ ಸಂಬಂಧಿಸಿದಂತೆ ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯಲ್ಲಿ ದಾಖಲಿಸಿರುವ ಎಲ್ಲಾ ಅಂಕಿ–ಅಂಶಗಳು ಪೂರ್ಣ ಪ್ರಮಾಣದಲ್ಲಿ ನಿಖರವಾಗಿರುವುದನ್ನು

ನೋಡಿಕೊಳ್ಳುವ ಜವಾಬ್ದಾರಿಯು ಇಲಾಖಾ ಮುಖ್ಯಸ್ಥರುಗಳದ್ದಾಗಿರುತ್ತದೆ. ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಮತ್ತು ಮುಖ್ಯ ಲೆಕ್ಕಾಧಿಕಾರಿಗಳ ಸಹಯೋಗದೊಂದಿಗೆ ಅಂಕಿ-ಅಂಶಗಳನ್ನು ಜಿಲ್ಲಾ ಪಂಚಾಯತ್‌ಗಳಿಂದ ಸಂಗ್ರಹಿಸಿ, ಕ್ರೋಢೀಕರಿಸುವ ಹಾಗೂ ಪ್ರತಿ ಇಲಾಖೆಯಲ್ಲಿ **HRMS-2** ಗಾಗಿ ನೇಮಕಗೊಂಡಿರುವ ನೋಡಲ್ ಅಧಿಕಾರಿಯ ಸಹಾಯದೊಂದಿಗೆ ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾರ್ಯಕ್ರಮಗಳ (Scheme) ಬಗ್ಗೆ ಅಂಕಿ-ಅಂಶಗಳನ್ನು ದಾಖಲಿಸುವ ಕಾರ್ಯವನ್ನು ಪೂರ್ಣಗೊಳಿಸುವ ಜವಾಬ್ದಾರಿಯು ಇಲಾಖಾ ಮುಖ್ಯಸ್ಥರುಗಳದ್ದಾಗಿರುತ್ತದೆ.

(ಎಫ್) ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರುಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಸಂಸ್ಥೆಗಳೆಲ್ಲವೂ **HRMS-2** ವ್ಯವಸ್ಥೆಯಡಿ ಬಂದಿರುವುದನ್ನು ದಿನಾಂಕ:07-11-2020ರೊಳಗೆ ಖಚಿತಪಡಿಸಿ ಕೊಳ್ಳತಕ್ಕದ್ದು.

(ಜಿ) ಗುತ್ತಿಗೆ ಆಧಾರದ ಮತ್ತು ದಿನಗೂಲಿ ನೌಕರರುಗಳ ವಿವರಗಳನ್ನು HRMS-2ನಲ್ಲಿ ನೀಡಲಾಗುವ ಪ್ರತ್ಯೇಕ ಸ್ಕ್ರೀನ್ ನಲ್ಲಿ ಇಲಾಖೆಗಳು ದಾಖಲಿಸುವುದು. ಜೊತೆಗೆ ಗುತ್ತಿಗೆ/ಹೊರಗುತ್ತಿಗೆ ನೌಕರುಗಳಿಗಾಗಿ ಉದ್ದೇಶಿತ ಲೆಕ್ಕಶೀರ್ಷಿಕೆ-034ರಡಿಯಲ್ಲಿ, ದಿನಗೂಲಿ ನೌಕರರುಗಳಿಗಾಗಿ ಉದ್ದೇಶಿತ ಲೆಕ್ಕ ಶೀರ್ಷಿಕೆ-033ರಡಿಯಲ್ಲಿ ಹಾಗೂ ಸಹಾಯಾನುದಾನ ಸಂಸ್ಥೆಗಳಲ್ಲಿನ ಹೊರಗುತ್ತಿಗೆ ನೌಕರರುಗಳಿಗಾಗಿ ಉದ್ದೇಶಿತ ಲೆಕ್ಕ ಶೀರ್ಷಿಕೆ-115 ಹಾಗೂ 001-ಸಂಚಿತ ವೇತನ(consolidated pay)ರಡಿಯಲ್ಲಿ ಪ್ರತ್ಯೇಕ ಅಂದಾಜುಗಳನ್ನು ಸಂಬಂಧಪಟ್ಟ ಇಲಾಖೆಗಳು ಇದರೊಂದಿಗೆ ಲಗತ್ತಿಸಿದ **ಅನುಬಂಧ-1ರ** ನಮೂನೆಯಲ್ಲಿ, ವೇತನೇತರ ವೆಚ್ಚದ ಅಂದಾಜುಗಳನ್ನು ಸಲ್ಲಿಸುವಾಗ ಕಳುಹಿಸತಕ್ಕದ್ದು.

3. **ಆರ್ಥಿಕ ಇಲಾಖೆ ಮತ್ತು ಹೆಚ್.ಆರ್.ಎಂ.ಎಸ್.ನ ಪಾತ್ರ**

ಎ) ಆರ್ಥಿಕ ಇಲಾಖೆಯು ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯಿಂದ ನೇರವಾಗಿ ಅಂಕಿ- ಅಂಶಗಳನ್ನು ಪಡೆದುಕೊಳ್ಳುತ್ತದೆ (port).

ಬಿ) ಅಂಕಿ-ಅಂಶಗಳನ್ನು ದಾಖಲಿಸುವಾಗ ಅಥವಾ ನಂತರದ ಹಂತದಲ್ಲಿ ಎದುರಾಗಬಹುದಾದ ಯಾವುದಾದರೂ ಪ್ರಾಯೋಗಿಕ/ತಾಂತ್ರಿಕ ಸಮಸ್ಯೆಗಳನ್ನು ಕಾಲವಿಳಂಬ ಮಾಡದೇ ತಕ್ಷಣವೇ ಯೋಜನಾ ಅಧಿಕಾರಿ, ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ ಇವರ ಗಮನಕ್ಕೆ ತರತಕ್ಕದ್ದು, ಇವರನ್ನು ದೂರವಾಣಿ ಸಂಖ್ಯೆ:080-22372882 ಮತ್ತು ಮಿಂಚಂಚೆ:**pdhrms2@karnataka.gov.in**ರಲ್ಲಿ ಸಂಪರ್ಕಿಸಬಹುದಾಗಿದೆ. ಈ ವಿಷಯವನ್ನು ಮಿಂಚಂಚೆ:**spobud-fd@karnataka.gov.in** ಮೂಲಕ ವಿಶೇಷಾಧಿಕಾರಿ(ಆಯವ್ಯಯ) ಆರ್ಥಿಕ ಇಲಾಖೆ ರವರ ಗಮನಕ್ಕೂ ತರತಕ್ಕದ್ದು.

4. <u>**ನೇಮಕಾತಿ ಆಧಾರದ ಮೇಲೆ ಹುದ್ದೆಗಳ ಅಗತ್ಯತೆಯನ್ನು ಅಂದಾಜಿಸುವ ವಿಧಾನ:**</u>

ಇಲಾಖೆಗಳಲ್ಲಿ ನೇಮಕಾತಿಗಳಾಗಿದ್ದಲ್ಲಿ ಹಾಗೂ ನೇಮಕಾತಿ ಪ್ರಕ್ರಿಯೆಯಲ್ಲಿದ್ದಲ್ಲಿ ಖಾಲಿ ಹುದ್ದೆಗಳು 2021–22ರಲ್ಲಿ ಭರ್ತಿಯಾಗುವ ಸಾಧ್ಯತೆ ಇರುವುದರಿಂದ 2021–22ರ ಅವಧಿಯಲ್ಲಿ ಕಾರ್ಯನಿರತ ಹುದ್ದೆಗಳ ಹೆಚ್ಚಳವು ವೇತನದ ಅಂದಾಜುಗಳ ಮೇಲೆ ಆರ್ಥಿಕ ಪರಿಣಾಮ ಬೀರುವುದರಿಂದ 2021–22ನೇ ಸಾಲಿನಲ್ಲಿ ಭರ್ತಿಯಾಗುವ ಹುದ್ದೆಗಳನ್ನು ಇಲಾಖಾ ಮುಖ್ಯಸ್ಥರುಗಳು ಮುಂದಾಲೋಚಿಸಿ ದಿನಾಂಕ:13.11.2020ರೊಳಗಾಗಿ ಆರ್ಥಿಕ ಇಲಾಖೆಗೆ **ಅನುಬಂಧ–2ರಂತೆ** ಮಾಹಿತಿಯನ್ನು ಒದಗಿಸಬೇಕು.

5. ಈ ಸುತ್ತೋಲೆಯನ್ನು ಅದರ ಅನುಬಂಧಗಳೊಂದಿಗೆ ಆರ್ಥಿಕ ಇಲಾಖೆಯ ವೆಬ್ ವಿಳಾಸ **www.finance.karnataka.gov.in** ನಿಂದ ಪಡೆಯಬಹುದಾಗಿದೆ.

Ekroop Caur

(ಏಕ್ ರೂಪ್ ಕೌರ್)
ಸರ್ಕಾರದ ಕಾರ್ಯದರ್ಶಿ(ಆ &ಸಂ)
ಆರ್ಥಿಕ ಇಲಾಖೆ.

<u>ಇವರಿಗೆ:–</u>

(1) ಪ್ರಧಾನ ಮಹಾಲೇಖಪಾಲರು(ಎ ಮತ್ತು ಇ),(ಜಿ ಮತ್ತು ಎಸ್ಎಸ್ಎ), (ಇ ಮತ್ತು ಆರ್ಎಸ್ಎ) ಕರ್ನಾಟಕ, ಬೆಂಗಳೂರು–1

(2) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು,ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು.

(3) ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ.

(4) ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್.

(5) ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.

(6) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.

(7) ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು.

(8) ಎಲ್ಲಾ ಇಲಾಖಾ ಮುಖ್ಯಸ್ಥರುಗಳು.

(9) ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.

(10) ಆರ್ಥಿಕ ಇಲಾಖೆಯ ಎಲ್ಲಾ ವಿಶೇಷ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿಗಳು/ಉಪ ಕಾರ್ಯದರ್ಶಿಗಳು/ಅಧೀನ ಕಾರ್ಯದರ್ಶಿಗಳು/ಶಾಖಾಧಿಕಾರಿಗಳು.

(11) ಕಛೇರಿ ಪ್ರತಿ/ ಹೆಚ್ಚುವರಿ ಪ್ರತಿಗಳು.

ANNEXURE-1

## Input format for Conslidated Salaries/Dailywagers/Contract/Outsource - 2021-22

| | | | | | | | | | |
|---|---|---|---|---|---|---|---|---|---|
| Department | | | | | | | | | |
| Sector | State/District | | | | | | | | |
| HOA | 12 Digit | | | | | | | | |
| District Code/District Name * | | | | | | | | | |
| | | | | | | | | | |
| **Object Heads** | **Description** | **Designation** | **Total Number of Employees working against the sanctioned post** | **Number of employees not working Against the Sanctioned post** | **Consolidated/ Total Pay Per Month** | **Number of Vacancies** | **Remarks** | | |
| 034 | Contract/OutSource | | | | | | | | |
| 035 | Salary of Board/Corp.Staff working in State Govt. on deputation | | | | | | | | |
| 115 | GIA-Contract/Outsource | | | | | | | | |
| 051/059/015 | Service Contract or any other type of employees | | | | | | | | |
| | | | **Requirement for one Month** | | | | | | |
| | | **Total Number of Employees working** | **Basic** | **DA** | **HRA** | **Others** | **Total Pay** | **Remarks** | |
| 033 | Dailywages (under the act) | | | | | | | | |
| 001 | Consolidated Salaries# | | | | | | | | |
| | | | | | | | | | |
| | | | | | | | | | |
| * for District Sector only | | | | | | | | | |
| # For State Sector HOAs only | | | | | | | | | |

# ಅನುಬಂಧ–2

(ಉದಾಹರಣೆಯೊಂದಿಗೆ)

| ಕ್ರ.ಸಂ. | ಸೇವೆಗೆ ಸೇರುವ ತಿಂಗಳು | ಸಂಬಳ ಸೆಳೆಯಲಾಗುವ ಲೆಕ್ಕ ಶೀರ್ಷಿಕೆ | ಅಧಿಕಾರಿಗಳ ಪದನಾಮ | ಸಂಖ್ಯೆ | ವೇತನ ಶ್ರೇಣಿ (ಕನಿಷ್ಟ–ಗರಿಷ್ಟ) | ಮೂಲ ವೇತನ | ಹೆಚ್.ಆರ್.ಎ | ಸಿಸಿಎ | ಇತರೆ ಭತ್ಯೆಗಳು (ತುಟ್ಟಿ ಭತ್ಯೆ ಹೊರತುಪಡಿಸಿ | ಒಟ್ಟು |
|---|---|---|---|---|---|---|---|---|---|---|
| 1 | ಮೇ 2020 | | ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ | 5 | 52650–97100 | 52650 | 12636 | 600 | 1000 | 66886 |
| 2 | ಮೇ 2020 | | ಕೃಷಿ ಅಧಿಕಾರಿ | 10 | 43100–83100 | 43100 | 10344 | 600 | 1000 | 55044 |
| 3 | | | | | | | | | | |
| 4 | | | | | | | | | | |
| 5 | | | | | | | | | | |
| 6 | | | | | | | | | | |
| 7 | | | | | | | | | | |
| 8 | | | | | | | | | | |
| 9 | | | | | | | | | | |
| ಕ್ರ.ಸಂ. | ಸೇವೆಗೆ ಸೇರುವ ತಿಂಗಳು | ಸಂಬಳ ಸೆಳೆಯಲಾಗುವ ಲೆಕ್ಕ ಶೀರ್ಷಿಕೆ | ಸಿಬ್ಬಂದಿಗಳ ಪದನಾಮ | ಸಂಖ್ಯೆ | ವೇತನ ಶ್ರೇಣಿ (ಕನಿಷ್ಟ–ಗರಿಷ್ಟ) | ಮೂಲ ವೇತನ | ಹೆಚ್.ಆರ್.ಎ | ಸಿಸಿಎ | ಇತರೆ ಭತ್ಯೆಗಳು (ತುಟ್ಟಿ ಭತ್ಯೆ ಹೊರತುಪಡಿಸಿ | ಒಟ್ಟು |
| 1 | ಮೇ 2020 | 2401–00–001–1–01 | ಪ್ರ.ದ.ಸ. | 15 | 27650–52650 | 27650 | 6636 | 500 | 1000 | 35786 |
| 2 | | | ಕಿ.ಸ. | 20 | 21400–42000 | 21400 | 5136 | 500 | 1000 | 28036 |
| 3 | | | | | | | | | | |
| 4 | | | | | | | | | | |
| 5 | | | | | | | | | | |
| 6 | | | | | | | | | | |
| 7 | | | | | | | | | | |
| 8 | | | | | | | | | | |
| 9 | | | | | | | | | | |